ಆದರೂ ಬಸ್‌ಸ್ಟಾಪಿಗೆ ಒಂದ ಕಟ್ಟಡ ಆಗಿರ್ಲಿಲ್ಲ. ಬಸ್‌ಸ್ಟಾಂಡ್ ಆಚೀಚೆ ಕೂಗಳತೆ ದೂರದಲ್ಲಿ ಸೈಟ್‌ಗಳು ಅಗದಿ ದೊಡ್ಡ ಸಂಖ್ಯೆಯಲಿ ಎದ್ದಿದ್ದವು.

ಒಂದು ಕಾಲದಲಿ ಯೂನಿವರ್ಸಿಟಿ ಬಿಟ್ಟರೆ ಏನು ಇಲ್ಲವಾಗಿದ್ದ ಆ ಜಾಗದಲ್ಲೀಗ ದೊಡ್ಡ ದೊಡ್ಡ ಸಿಮೆಂಟ್ ಮನೆಗಳು ನಿರ್ಮಾಣವಾಗಿ ದೊಡ್ಡ ಬಡಾವಣೆಯೂ ಎದ್ದು ನಿಂತಿತ್ತು. ಬಡಾವಣೆ ಆಜುಬಾಜುಕ ಎಲ್ಲ ಹಾದಿಗಂಟಿಕೊಂಡಿದ್ದ ಈ ಬಸ್ ನಿಲ್ದಾಣ ಎಲ್ಲ ರೀತಿಯಿಂದಲೂ ಅಲ್ಲಿನ ನಿವಾಸಿಗಳಿಗೆ ಅನುಕೂಲಕರ ಅನ್ನೋ ವಾತಾವರಣ ನಿರ್ಮಿಸಿತ್ತು. ಇತ್ತಿತ್ತಲಾಗಿ ಅಲ್ಲೇ ಸೈಟ್‌ಗಳಿಗೆ ಮತ್ತೆ ಬಾಡಿಗೆ ಮನೆ ವೆಚ್ಚ ಹೆಚ್ಚು ಅನಿಸಲು ಇದೊಂದು ದೊಡ್ಡ ಕಾರಣವಾಗಿತ್ತು. ಸೈಟು, ಮನೆಗಳನ್ನ ಬಾಡಿಗೆಗೆ ವಿಚಾರಿಸಲು ಬಂದೋರಿಗೆಲ್ಲಾ ಅವುಗಳ ಮಾಲೀಕರು ಅಲ್ಲಿನ ಸೌಲಭ್ಯಗಳನ್ನ ಬಾಯಿಪಾಠ ಮಾಡಿದವರಂತೆ ಎಲ್ಲವನ್ನೂ ಹೇಳಿದ ಮೇಲೆ, ‘ಬಾಜೂಕ ಎಡವಿ ಬಿದ್ರ ಬಸ್‌ಸ್ಟಾಪ್ ಐತಿ. ಎಲ್ಲಾ ಥರದ ಅನುಕೂಲ ಇರೋ ಜಾಗ ಇದು’ ಅಂತ ಕೊನೀಗೆ ಒತ್ತಿ ಒತ್ತಿ ಹೇಳುತ್ತಿದ್ದರು.

ಹೀಗೆ ಮೊದಲು ಏನೂ ಇಲ್ಲದಂಗೆ ಯಾರೋ ಮನವಿ ಮಾಡಿಕೊಂಡಿದ್ದಕ್ಕೆ ಚಾಲೂ ಆಗಿದ್ದ ಬಸ್‌ಸ್ಟಾಪ್, ಬರಬರುತ್ತಾ ಅಲ್ಲಿನ ನಿವಾಸಿಗಳ ಪಾಲಿಗೆ ಈ ತೆರನಾಗಿ ಅವರ ತಲೆಯಲಿ ಹೊಕ್ಕಿತ್ತು. ಪಾವಟೆನಗರ, ಹನಮಂತ ನಗರ, ಕಲ್ಯಾಣ ನಗರ, ಶ್ರೀರಾಮನಗರ ಹೀಗೆ ಬಹುತೇಕ ಧಾರವಾಡದ ಮೈಯೊಳಗೆ ಅಡಗಿ ಕುಂತಿದ್ದ ಬಡಾವಣೆಗಳಿಗೆ ಹೋಗಬೇಕಾದರೆ ನವೋದಯ ನಗರವೇ ‘ವಾಯಾ’ ಆಗಿತ್ತು. ಹಿಂಗಾಗಿ ಅಲ್ಲಿಗೆ ಬಂದು ಹೋಗುವ ಸಿಟಿ ಬಸ್ಸುಗಳ ಸಂಖ್ಯೆ ಏನೂ ಕಡಿಮೆ ಇರಲಿಲ್ಲ. ದಿನಾ ಏನಿಲ್ಲವೆಂದರೂ ಐವತ್ತು ಅರವತ್ತು ಬಸ್ಸು ಅಲ್ಲಿ ಹರದಾಡುತ್ತಿದ್ದವು. ಹೀಗೆ ಅಡ್ಡಾಡ್ತಿದ್ದ ಬಸ್ಸುಗಳು ನವೋದಯನಗರ ಬಸ್‌ಸ್ಟಾಪಿನಲಿ ನಿಂತಾಗೆಲ್ಲಾ ಆ ದೊಡ್ಡ ಆಲದ ಮರದ ನೆರಳು ಬಸ್‌ಗಳ ಮೇಲೆ ಮಟ್ಟಸವಾಗಿ ಬೀಳುತ್ತಿತ್ತು. ಈ ತಿಮ್ಮಣ್ಣನ ಮನಿ ಬಸ್‌ಸ್ಟಾಪಿಗೆ ಹತ್ತಿಕೊಂಡೆ ಇತ್ತು. ಜೋರಾಗಿ ಗಾಳಿ ಬೀಸಿದಾಗೆಲ್ಲ ಗಿಡದ ಎಲೆಗಳು ತಿಮ್ಮಣ್ಣನ ಮನೆಯ ಬಾಲ್ಕನಿಯೊಳಗೆ ಬಿದ್ದಾಗ ಎಲೆಯೊಳಗೆ ಹರದಾಡ್ತಿದ್ದ ಇರುವೆಗಳು ಒಳಗೆ ಬರುತ್ತಿದ್ದವು. ಬಾಲ್ಕನಿಯೊಳಗೆ ನಿಂತರೆ ಆಲದ ಮರ ತೀರಾ ಹತ್ತಿರ ಅನ್ನುವಂತೆ ಹರಗ್ಯಾಡುತ್ತಿದ್ದ ಇರುವೆ ಸಾಲು ತೆಳ್ಳನೆಯ ಕಪ್ಪು, ಕೆಂಪನೆಯ ದಾರದಂತೆ ಸ್ಪಷ್ಟವಾಗಿ ಕಾಣತ್ತಿತ್ತು.

ಬಾಲ್ಕನಿಯೊಳಗೆ ಬಂದು ನಿಂತನೆಂದರೆ ಎಳೆ ಬಿಸಿಲನ್ನು ಕತ್ತಲು ಚೂರು ಚೂರು ತಿನ್ನುತ್ತಾ ಜಗ ಪೂರ್ತಿ ಕಪ್ಪಡರಿದರೂ ತಿಮ್ಮಣ್ಣ ಲೋಕದ ಪರಿವೆ ಇಲ್ಲದೋರಂತೆ ಇದ್ದು ಬಿಡ್ತಿದ್ದ. ಅಥವಾ ಅಂವಾ ಹಾಗಿರಲು ಇತ್ತೀಚಿಗೆ ಅವನನ್ನ ತುಂಬಾ ಪೀಡಿಸ್ತಿದ್ದ ಏಕಾಂತ ಕಾರಣ ಆಗಿತ್ತೇನೋ? ಬಾಲ್ಕನಿಗೆ ಬಂದು ನಿಂತಾಗೆಲ್ಲಾ ತಿಮ್ಮಣ್ಣನಲ್ಲಿ ಸುರುಳಿ ಸುರುಳಿಯಾಕಾರದ ನೂರೆಂಟು ಯೋಚನೆಗಳು. ಒಂದಾದ ಮೇಲೊಂದರಂತೆ ಹಂಗೆ ಬಂದು ಹಿಂಗೆ ಸಿಗರೇಟಿನ ಹೊಗೆಯಂಗೆ ಗಾಳಿಯೊಳಗೆ ಲೀನ ಆದಂತಾಗಿ ಬಿಡುತ್ತಿದ್ದವು. ಹುಚ್ಚು ಏಕಾಂತವನ್ನೆಲ್ಲಾ ತನಗೆ ತಾನೇ ಭ್ರಮಿಸಿ, ಸ್ವಾಗತಿಸಿಕೊಂಡು ನಿಂತಾಗೆಲ್ಲಾ ತಿಮ್ಮಣ್ಣ ಬರೀ ಆಲದ ಮರವನ್ನೇ ದಿಟ್ಟಿಸುತ್ತಿದ್ದ. ನೆಲಕ್ಕೆ ಮುತ್ತಿಡೋ ಶಪಥ ಮಾಡಿದಂತೆ ಭೂಮಿಯತ್ತಲೇ ಮುಖ ಮಾಡಿದ್ದ ಅದರ ಬಿಳಲುಗಳು ತಿಮ್ಮಣ್ಣನಿಗೆ ತನ್ನ ಕಳ್ಳುಬಳ್ಳಿಯಂತೆ ಕಾಣಿಸುತ್ತಿದ್ದವು. ದಿನಾ ಆಗೀಗ ಬಲು ಜೋರಾಗಿ ಒದರುತ್ತಿದ್ದ ಹುಸೇನವ್ವ, ಬಿಸ್ಮಿಲ್ಲಾ, ಮಂಜಾ, ಮತ್ತು ಬಸ್ಸಿನ ಸಪ್ಪಳ ಇವ್ಯಾವು ಆತನ ಚಿತ್ತ ಕೆಡಿಸುತ್ತಿದ್ದಂತಿರಲಿಲ್ಲ. ಶಹರದ ಹೊರಗೆ ಇದ್ದದ್ದರಿಂದ ಸಿಟಿಯ ಟ್ರಾಫಿಕ್ಕಿಗೆ ಹೋಲಿಸಿದರೆ ನವೋದಯ ನಗರ ಬಹಳ ಶಾಂತ ಶಾಂತ. ಯಾವತ್ತೂ ಜಗಳ ಮಾಡದ ಗಂಡ ಹೆಂಡಿರ ಮನೆಯಂತೆ. ಈ ಕಾರಣಕ್ಕಾಗಿಯೇ ಬಹಳ ಮಂದಿ ನಿವೃತ್ತ ಸರಕಾರಿ ನೌಕರರು, ದೇಶದ ಬೇರೆ ಬೇರೆ ಕಡೆ ಪಾಠ ಮಾಡುತ್ತಿದ್ದ ಧಾರವಾಡದ ಖ್ಯಾತನಾಮ ಪ್ರೊಫೆಸರ್‌ಗಳು ಅಲ್ಲಿ ಇಷ್ಟಪಟ್ಟು ಮನೆಮಾಡಿದ್ದರು. ಊರಿನ ಯಾವ ಒಣ ಉಸಾಬರಿಗಳು ಆ ಏರಿಯಾಕೆ ಬರಲು ಸಾಧ್ಯವೇ ಇರಲಿಲ್ಲ. ಬಂದರೂ ಅವು ಬೆಳೆಯುತ್ತಿರಲಿಲ್ಲ.

ತಿಮ್ಮಣ್ಣನ ಅಪ್ಪ ಬುಳ್ಳಪ್ಪ ಮನೆಯಲ್ಲಿ ಹೊಳ್ಳಾ-ಬಳ್ಳಾ ರಿಪಿರಿಪಿಯಾಗಿದ್ದ ಜಗಳಕ್ಕೆ ಬೇಸತ್ತಿದ್ದ. ಹುಟ್ಟಿಬೆಳೆದ ಹಳ್ಳಿಯಲಿದ್ದ ಪಿತ್ರಾರ್ಜಿತ ಆಸ್ತಿಯನ್ನೆಲ್ಲಾ ಆ ಕಾಲಕ್ಕೆ ಮಾರಿದ್ದ. ಸಾಕಷ್ಟು ರೊಕ್ಕದ ಇಡುಗಂಟು ಅದೇ ಕಾಲದಲ್ಲಿ ಬುಳ್ಳಪ್ಪನ ಬಕ್ಕಣ ತುಂಬಿತ್ತು. ಆಸ್ತಿ ಮಾರಿದ ಮೇಲೆ ತಿಮ್ಮಣ್ಣನ ಶಿಕ್ಷಣದ ಸಲುವಾಗಿ ತನಗಿದ್ದ